Registered Number M. 1299. SATYAVADI (Founded 1917) Every Evening

ಸತ್ಯವಾದಿ

ಸೋಮವಾರದ ಸಂಚಿಕೆ (ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂವುಟ 28 ಸಂಚಿಕೆ 289] ಸೋಮವಾರ 20—8—45 [6 ಪೈ

ಅಸ್ಪಿ ಚಿವ್ಮೂರ್ ಖೈದಿಗ ಜೀವ ಉಳಿಯಿತು

ಚಿಮ್ಮೂರ್ ಅಸ್ಪಿ ಮೊಖದ್ದಮೆಗಳಲ್ಲಿ ಮಾತ್ರವೇ ಅಲ್ಲದೆ ಫಾತ್ವಾ ಜಾಗಪುರ ಮತ್ತು ಕುಲಶೇಖರಪಟ್ಟಣದ ಮೊಖದ್ದಮೆಗಳಲ್ಲಿ ಮರಣದಂಡನೆಗೆ ಗುರಿಯಾಗಿದ್ದವರೆಲ್ಲರಿಗೂ ಗೌರ್ನರ್ ಜನರಲ್ಲರು ಜೀವದಾನ ಮಾಡಿದಾರೆ. ಮರಣದಂಡನೆ ಶಿಕ್ಷೆಯು ಜೀವಾವಧಿ ಸಜವಾಗಿ ಫೂರ್ಪಡಿಸಲಾಗಿದೆ. ಇದು ಮಹಾತ್ಮಾ ಗಾಂಧಿಯವರ ವಿಶ್ವಪ್ರಯತ್ನದ ಫಲವೇ ಆಗಿದೆ. ಇದು ಎಲ್ಲ ಕಡೆಗಳಲ್ಲೂ ಸಂತೋಷವನ್ನುಂಟುಮಾಡಿದೆ.

ಂ ಂ

ಪೀಟರ್ ಬದುಕಿಕೊಂಡ

ಮಾ || ಪೀಟನ್ನಿಗೆ ಕೋರ್ಟಿನವರು ವಿಧಿಸಿದ್ದ ಮರಣದಂಡನೆ ಶಿಕ್ಷೆಯನ್ನು ಜ್ಞ || ಡಿಗಾಲರು ಜೀವಾವಧಿ ಕಾರಾವಾಸ ಶಿಕ್ಷೆಗೆ ಬದಲಾಯಿಸಿದ್ದಾರೆ. ಈ ಕನಿಕರ ಕಾರ್ಯಕ್ಕೆ ಪೀಟನ್ನಿನ ವೃದ್ಧಾಪ್ಯವೂ ಕೋರ್ಟಿನವರ ಶಿಫಾರಸ್ಸೂ ಕಾರಣವಾಗಿದೆ.

ಂ ಂ

ವಿಜಯೋತ್ಸವಕ್ಕೆ ಆಹ್ವಾನ

ಟೋಕಿಯೋದಲ್ಲಿ ಮಿತ್ರರು ನಡೆಸ ಬಹುದಾದ ವಿಜಯೋತ್ಸವ ಸಮಾರಂಭಕ್ಕೆ ಬರ್ಮಾ ರಣಕ್ಷೇತ್ರದಲ್ಲಿ ಹೋರಾಡಿದ ಬ್ರಿಟಿಷ್ ಸೈನಿಕರೂ ಆಹ್ವಾನಿಸಲ್ಪಟ್ಟಿದ್ದಾರೆ.

ಬೆಂಗಳೂರು— ವಿಜಯೋತ್ಸವ ಸಂಬಂಧವಾಗಿ 20 ನೇ ತಾ || ಸೋಮವಾರವೂ ಸರ್ಕಾರಿ ರಜಾ ದಿನವಾಗಿದೆ.

ಂ ಂ

ಮೈಸೂರು— ವಿಜಯೋತ್ಸವದ ಬಗ್ಗೆ ನಿನ್ನೇ ದಿವಸ ಮು || ಪ್ರೆ || ಮಾಡಿದ್ದ ಕಾರ್ಯಕ್ರಮದಂತೆ ಪಾರ್ಥನೆ, ಆಟಪಾಟ, ಅನ್ನವಸ್ತ್ರ ದಾನ ನಡೆಯಿತು.

ರಷ್ಯ ಯುದ್ಧಕ್ಕೆ ಸೇರಿದ ಕಾರಣ ?

ರಷ್ಯಾ ಜಪಾನ ಪ್ರಥನು ಯುದ್ಧವು 9-8-1905 ನೇ ದಿನ ಕೊನೆಗೊಂಡಂತಾಗಿ ಸನಾಧಾನ ಸಂಬಂಧವಾದ ಮಾತು ಕಥೆಗಳು ಆರಂಭವಾದುವು. ಆ ಕರಾರಿನಂತೆ ರಷ್ಯವು ಜಪಾನಿಗೆ ಪೋರ್ಟ್ ಆರ್ಥರ್ ಮತ್ತು ಉತ್ತರ ಶಬಲಿನ್ ದ್ವೀಪಗಳನ್ನು ಬಿಟ್ಟುಕೊಟ್ಟಿದ್ದಲ್ಲದೆ ಮಂಚೂರಿಯಾವಲ್ಲಿದ್ದ ರಷ್ಯನರೆಲ್ಲರೂ ಆ ದೇಶವನ್ನು ಬಿಟ್ಟು ಸ್ವದೇಶಕ್ಕೆ ಹಿಂದಿರುಗಿದರು. ಕೊರಿಯಾದ ಮೇಲಿನ ಜಪಾನ್ ಅಧಿಕಾರವನ್ನು ಅಂಗೀಕರಿಸಬೇಕಾಯಿತು. ಈ ಕಾರಣಗಳಿಂದ ೪೦ ವರ್ಷಗಳ ನಂತರ ಅದೇ ದಿನ ರಷ್ಯವು ಮಂಚೂರಿಯಾದೊಕ್ಕೆ ನುಗ್ಗಿ ತನ್ನ ಬಲವನ್ನು ಪ್ರದರ್ಶಿಸಿತು. ಹಿಂದಿನ ಯುದ್ಧದಲ್ಲಿ ತಾನು ಕಳೆದು ಕೊಂಡಿದ್ದ ತನ್ನ ಭೂ ಭಾಗಗಳನ್ನೂ, ಸೌಕರ್ಯಗಳನ್ನೂ ಪುನಹ ಪಡೆಯುವ ವರೆಗೂ ರಷ್ಯವು ಸುಮ್ಮನಿರಂಬಾರದು.

ಂ ಂ

ಐದು ಲಕ್ಷ ರೂ. ನಿಧಿ

ದಕ್ಷಿಣ ಭಾರತ ಹಿಂದಿ ಪ್ರಚಾರ ಸಭೆಯ ಅಧ್ಯಕ್ಷತೆಯನ್ನು ವಹಿಸಲು ಮಹಾತ್ಮ ಗಾಂಧಿಯವರು ಮುಂದಿನ ಡಿಸೆಂಬರ್ ತಿಂಗಳಲ್ಲಿ ಮದ್ರಾಸಿಗೆ ಬರಲಿರುವರಷ್ಟೆ. ಆಗ ಅವರಿಗೆ ಐದು ಲಕ್ಷ ರೂ. ನಿಧಿಯರ್ಪಿಸಲಾಗುವುದು.

ಮೈಸೂರು— ವಿಜಯೋತ್ಸವ ಸಂತೋಷಕ್ಕಾಗಿ ನಿನ್ನೇ ದಿವಸ ಜವಳಿ ವರ್ತಕರ ಸಂಘದ ಸದಸ್ಯರು ತಮ್ಮ ವ್ಯಾಪಾರ ಸಂಸ್ಥೆಗಳಿಗೆ ರಜವಿತ್ತಿದ್ದರು.

ಂ ಂ

ಇಸ್ತಂಬಾಲ್— ಮುಂದಿನ ನವೆಂಬರ್ ಹೊತ್ತಿಗೆ ಈಗಿರುವ ಟರ್ಕಿ-ರಷ್ಯಾ ಒಪ್ಪಂದ ಮುಗಿಯುವುದೆಂದೂ, ನುಂಡಿಯು ಟರ್ಕಿ ರಷ್ಯಾ ಸೌಹರ್ದ ಸಂಘಾ ದಿಸದಿದ್ದರೆ ಅದರ ಸ್ಥಿತಿ ಕಳವಳವಾದು ದೆಂದೂ ಹೇಳಲಾಗಿದೆ.

ಭಾರತೀಯ ಸಭೆ

' ಹಿಂದೂ ಮಹಾಸಭೆ ' ಯೆಂಬ ಹೆಸರನ್ನು ' ಭಾರತೀಯ ಸಭೆ ' ಎಂದು ಬದಲಾಯಿಸಬೇಕೆಂದು ಡಾ | ಶ್ಯಾಮ ಪ್ರಸಾದ್ ಮುಖರ್ಜಿ ಸೂಚಿಸಿದ್ದಾರೆ.

ಂ ಂ

ವಿಟಮಿನ್

ಅಮೇರಿಕ ಪ್ರೊಫೆಸರ್ ಹಾಲ್ಡಿಯುವರು ವಿಟಮಿನ್ನುಗಳ ವಿಚಾರದಲ್ಲಿ ಜನ ವಿಶ್ವಾಸವು ಅಂಧ ವಿಶ್ವಾಸ ಮಾತ್ರವೆಂದೂ, ಅದೂ ಒಂದು ಬಗೆಯ ಹುಚ್ಚೆಂದೂ, ವಿಟಮಿನ್ನುಗಳನ್ನು ನುಂಗಿದರೂ ನುಂಗದಿದ್ದರೂ ವ್ಯತ್ಯಾಸವೇನೂ ಇರುವುದಿಲ್ಲವೆಂದೂ, ಆರೋಗ್ಯ ಲಾಭಕ್ಕಾಗಿ ವಿಟಮಿನ್ನುಗಳ ಕಡೆ ದೃಷ್ಟಿಯಿಡುವ ದಕ್ಕಿಂತ ಉಪವಾಸದ ಕಡೆ ನೆಲೆಗೊಳಿಸುವುದು ಚಿತವೆಂದೂ ತಿಳಿಸಿರುವರು.

ಂ ಂ

ಲಂಡನ್ನಲ್ಲಿ ಮನೆಗೆ ಅಭಾವ

ಹಿಟ್ಲರಿನ ಬಾಂಬುಗಳಿಂದ ಅನೇಕ ಮನೆಗಳು ನಾಶವಾದ ಕಾರಣದಿಂದ ನಿವಾಸ ಗೃಹಗಳ ಅಭಾವವು ಹೆಚ್ಚಿದೆ. ಸಂಸಾರಕ್ಕೆ ಅವಶ್ಯಕವಾದ ಮಂಚ, ಇತ್ಯಾದಿಗಳು ಒಂದು ನಿವಾಸ ಗೃಹಕ್ಕೆ ಅವಶ್ಯಕವಾದ ಪದಾರ್ಥಗಳನ್ನು ಮನೆ ಮಾಲಿಕರಿಂದ ಕೊಂಡುಕೊಂಡರೆಲ್ಲದೇ ಆ ಗೃಹಗಳು ಬಾಡಿಗೆಗೆ ದೊರೆಯುತ್ತಿಲ್ಲ. ಒಂದು ಸ್ಥಳದಿಂದ ಇತರ ಪ್ರದೇಶಗಳಿಗೆ ಹೋಗ ಬೇಕಾದಾಗ ಆ ಪದಾರ್ಥಗಳನ್ನು ಬಾಡಿಗೆದಾರರುಗಳು ಸಾಗಿಸಿಕೊಂಡು ಹೋಗಲು ಸೌಕರ್ಯಗಳಿಲ್ಲದ ಕಾರಣವಿಂದ ಅತಿ ಅಲ್ಪ ಬೆಲೆಗೆ ಮನೆಯ ಮಾಲೀಕರಿಗೇ ಕೊಟ್ಟು ಹೋಗುವರು. ಆವು ಹೊಸದಾಗಿ ಬಾಡಿಗೆಗೆ ಬರುವಂಥವರಿಗೆ ಹೆಚ್ಚಿನ ಬೆಲೆಗೆ ಮಾರಿ ಲಾಭ ಹೊಂದುತ್ತಿರುವರು.

ವರ್ತಮಾನ ಸಂಗ್ರಹ

ಅಹಮದಾಬಾದಿನಲ್ಲಿನ ಪ್ರೊಪ್ರೈಟರೀ ಹೈ ಸ್ಕೂಲಿನ 400 ಮಂದಿ ವಿದ್ಯಾರ್ಥಿಗಳು ಮುಷ್ಕರ ಹಿಡಿದಿದ್ದಾರೆ.

ಜಪಾನ್ ಆಕ್ರಮಣದಲ್ಲಿ ಭಾರತ ಸೈನೀಕರೂ ಸೇರಿಸಲ್ಪಡಬೇಕೆಂದು ಒಂದು ಕೇಳಿಕೆಯಾಗಿದೆ.

ಗಾಂಧೀಜಿ ಬಂಗಾಳಾಕ್ಕೆ ನವೆಂಬರಿನಲ್ಲಿ ಭೇಟ ಕೊಡುವರೆಂದು ತಿಳಿಯಬಂದಿದೆ.

1942 ರ ಗಲಭೆ ಸಂಬಂಧದಲ್ಲಿ ಮರಣ ದಂಡನೆಗೊಳಗಾದ ಸುಕ್ಕೂರಿನ ಹೇಮು ಕಲಾಮಿ ಎಂಬಾತನ ತಾಯಿಗೆ ಮಾ | ಅಜಾದರು ಒಂದು ಪದಕವನ್ನು ಬಹುಮಾನಿಸಿದರು.

ಸ್ವಿಡ್ಜರ್ಲೆಂಡಿನಲ್ಲಿದ್ದ ಜಪಾನ್ ಆಸ್ತಿಗಳೆಲ್ಲಾ ಮುಟ್ಟುಗೋಲುಹಾಕಲಾಗಿದೆ.

ಬೆಂಗಳೂರು— ಮೈಸೂರು ಕಾಂಗ್ರೆಸ್ ಮುಖಂಡರಾದ ಶ್ರೀ ಶಿವಮ್ಮಾ ರೆಡ್ಡಿಯವರು ಸರ್ಕಾರದವರು ಅವರ ಮೇಲೆ ಮಾಡಿದ್ದ ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿದರೆಂದು ದಸ್ತಗಿರಿ ಮಾಡಲ್ಪಟ್ಟು ನಾಗಸಂದ್ರ ಗ್ರಾಮಕ್ಕೆ ಕರೆದೊಯ್ಯಲ್ಪಟ್ಟರು.

ಚೈನಾದಲ್ಲಿ ಕಮ್ಯುನಿಸ್ಟರಿಗೂ ಕೇಂದ್ರ ಸರಕಾರಕ್ಕೂ ಏದೊಂದೂ ಒಡಂಬಡಿಕೆಯಾಗದೆ, ನಾಕಿಂಗ್ ಮತ್ತು ಪೀಸಿಂ ಮಧ್ಯೆ ಹೊಡೆದಾಟ ನಡೆಯಿತು. ಇದು ಹೀಗೇ ಹೆಚ್ಚಾದರೆ ಭಾರಿ ಸಿವಿಲ್ ವಾರ್ ಆಗುವದೆಂದು ಹೇಳಲಾಗಿದೆ.

ಯುದ್ಧ ಮುಗಿದ ಕಾರಣ ಇಂಡಿಯಾ ಸರ್ಕಾರದ ಸಪ್ಲೈ ಇಲಾಖೆಯು ಸೌಕರಂಲ್ಲಿ ಶೇಕಡ 25 ರಷ್ಟು ಕಡಮೆ ಮಾಡುವರೆಂದೂ, ಕೆಲವರನ್ನು ಅಯಾ ಪ್ರಾಂತ್ಯ ಸರಕಾರಗಳಿಗೆ ಕಳುಹಿಸಲಾಗುವುದೆಂದೂ ತಿಳಿಯಬಂದಿದೆ.

ಅಲ್ಲಿ — ಇಲ್ಲಿ

ಈಗಿನ ಭಾರತ ಸೆಕ್ರೆಟರಿ ಆಫ್ ಸ್ಟೇಟರಾದ ಮಿ || ಪೆಥಿಕ್ ಲಾರೆನ್ಸ್‌ರು ಹಿಂದೆ ಮೈಸೂರಿಗೆ ಬಂದಿದ್ದಾಗ್ಗೆ ಒಂದು ಸಾರ್ವಜನಿಕ ಸಭೆಯಲ್ಲಿ ಮಿ || ಲಾರೆನ್ಸ್‌ರೂ. ಮೈಸೂರು ಕಾಂಗ್ರೆಸ್ ಮುಖಂಡರಲ್ಲೊಬ್ಬರಾದ ಶ್ರೀ ಭಾಷ್ಯಂರವರೂ ಕೂಡಿ ಭಾಷಣಮಾಡಿದ್ದರಂತೆ.

ಂ ಂ

ಜೆಸ್ಟರು ಭಾರತದ ತಾತ್ಕಾಲಿಕ ವ್ಯವಸ್ಥೆಗೆ ಲೀಗು ವಿರೋಧವಾಗಿದೆಯೆಂದು ಹೇಳುತ್ತಾ, ಸ್ಥಿರವಾದ ವ್ಯವಸ್ಥೆಯೆಬೇಕೆಂದಿದ್ದಾರೆ. 'ಜರ್ಮನಿಯ ಯುದ್ಧ ಮುಗಿದು, ಜಪಾನಿನ ಯುದ್ಧ ನಡೆಯುತ್ತಿರುವಾಗ ತಾತ್ಕಾಲಿಕ ವ್ಯವಸ್ಥೆಯೇಕೆ' ಎಂದವರ ಪ್ರಶ್ನೆ ! ಹಿಂದೂ ಸ್ಥಾನದ ಸ್ವಾತಂತ್ರ್ಯ ಸಮಸ್ಯೆಯ ಮೊದಲೇ ಪಾಕಿಸ್ತಾನಕ್ಕೆ ಒಪ್ಪಿಗೆ ಸಿಗಬೇಕು. ಪಾಕಿಸ್ತಾನವನ್ನು ಬಿಟ್ಟು ಲೀಗು ಯಾವ ವ್ಯವಸ್ಥೆಗೂ ಒಪ್ಪದೆಂದು ದೃಢಪಡಿಸಿದ್ದಾರೆ.

ಂ ಂ

ನಿಜವಾದ ಶಾಂತಿಯು ನೆಲೆಸಿಲ್ಲ ಬೇಕಾದರೆ ಗ್ರೀಸಿನಲ್ಲಿ ಪ್ರಜಾಪ್ರಭುತ್ವ ಬಲವಾಗಿ ಬೇರೂರುವುದು ಅಗತ್ಯ. ಗ್ರೀಸಿನಲ್ಲಿ ಹಿಂದಿನ ಸಾರ್ವಭೌಮರ ಅಡಳಿತವನ್ನು ಪುನಃ ಸ್ಥಾಪಿಸಲು ಪ್ರಯತ್ನಿಸಿದ ಚರ್ಚಿಲ್ ಮತ್ತು ಕಂಪೆನಿ ಸೋತು ಹೋಗಿದೆ. ಪೋಸ್ಡಾಂ ಒಪ್ಪಂದಕ್ಕೆ ಸಹಿ ಹಾಕಿದ ಶಕ್ತಿಗಳೆಲ್ಲ-ಗ್ರೀಸಿನಲ್ಲಿ ಪ್ರಜಾ ಪುರೋಗಾಮಿ ಜನತೆಗೆ ಬೆಂಬಲ ಕೊಡಬೇಕಾದುದು ಅಗತ್ಯ.

ಂ ಂ

ಯಾವ ಸೈನ್ಯದಲ್ಲಿ ಅನೇಕ ಹಿಂದೀ ಪಥಕಗಳು ಕೆಲಸ ಮಾಡಿದವೋ ಮತ್ತು ಯಾವುದು ನಾಲ್ಕು ವರ್ಷಗಳವರೆಗೆ ನಡೆದ ಘೋರ ಕಾಳಗಗಳಲ್ಲಿ ಉತ್ತರ ಆಫ್ರಿಕಾದ ಅಲಾಮಿನಾದದಿಂದ ಯೂರೋಪಿನ ಆಲ್ಪ್ಸ್ ಪರ್ವತದವರೆಗೆ 2500 ಮೈಲುಗಳ ಪ್ರದೇಶಗಳ ಮೇಲಿಂದ ಮುಸುಕು ಮತ್ತು ಮುಂಬಿಸಲ್ಲಿ ಹೋರಾಡುತ್ತಾ ಹೋಯಿತೋ ಆ ಪ್ರಸಿದ್ಧವಾದ 8 ನೇ ಸೈನ್ಯವು ಜುಲೈ 29 ಕ್ಕೆ ವಿಸರ್ಜಿಸಲ್ಪಟ್ಟಿತು. ಈ ಸೈನ್ಯವನ್ನು ಲಾರ್ಡ್ ವೇವೆಲ್ಲರು ಮತ್ತು ಜ || ಐಸ್ ಹೋವರ್ ಮತ್ತು ಜ || ಮಾರ್ಕ್ ಕ್ಲಾರ್ಕರು ಪ್ರಶಂಸಿಸಿದ್ದಾರೆ.

2 ನೇ ಮಹಾಯುದ್ಧ ಮುಕ್ತಾಯ

ಇದಕ್ಕೆ ಕಾರಣಭೂತರಾದ ಹಿಟ್ಲರ್, ಮುಸಲೋನಿ, ಮಿಕಾಡೋ ಪೈಕಿ, ಹಿಟ್ಲರ್, ಮುಸಲೋನಿಗಳ ಆಟವು ಕೆಲವು ತಿಂಗಳ ಹಿಂದೆಯೇ ಪೂರೈಸಿತು. ಮಿಕಾಡೋ ಸರಾಕ್ಯವೂ ಈಗ ಶಣ್ಣಗಾಯಿತು.

ಜಪಾನ್ ಸುಸೂಕಿ ಮಂತ್ರಿಮಂಡಲ ರಾಜೀನಾಮೆಯಿತ್ತಿದೆ.

ಜಪಾನ್ ಬಳಿ ಮಿತ್ರ ನೌಕೆಗಳ ಮೇಲೆ ವಿಮಾನಧಾಳಿಯಾಯಿತು.

ತಮ್ಮ ಪಡೆಗಳು ತಕ್ಷಣ ಯುದ್ಧ ನಿಲ್ಲಿಸಬೇಕೆಂದು ರಾಜಾಜ್ಞೆಯಾಗಿದೆ.

ಮಂತ್ರಿಮಂಡಲ ರಚಿಸಲು ರಾಜಸಂಬಂಧಿಯೊಬ್ಬನಿಗೆ ಆಹ್ವಾನವಿತ್ತಿದೆ.

ಆಗ್ನೇಯ ಏಷ್ಯದಲ್ಲಿ ಕದನ ನಿಲ್ಲಿಸಬೇಕೆಂಬ ಆಜ್ಞೆ ಜಾರಿಯಾಯಿತು.

ಶಾಂತಿ ಪತ್ರ ರುಜುವಿಗಾಗಿ ಜಪಾನ್ ರಾಯಭಾರಿ ಬೇಕೆಂದಿದ್ದರು.

ಈ ವಿಷಯದಲ್ಲಿ ಜಪಾನ್ ಉತ್ತರವನ್ನೇನೂ ಕೊಟ್ಟಿಲ್ಲ.

ಜಪಾನರ ಶರಣಿಗಾಗಿ ಮ್ಯಾನಿಲಾದಲ್ಲಿ ಸಿದ್ಧತೆಗಳು ನಡೆಯುತ್ತಿವೆ.

ಶಾಂತಿಯ ಬಗ್ಗೆ ಜಪಾನಿ ರಾಯಭಾರಿ ಮ್ಯಾನಿಲಾಕ್ಕೆ ಬರುವರು.

ಲಂಡನ್, ಆ 14 — ಸಂಯುಕ್ತ ಅಮೇರಿಕಾ ಯುದ್ಧವಾರ್ತಾ ಕಛೇರಿಯ ಹೇಳಿಕೆಯಂತೆ, ಜಪಾನಿನ ಸರ್ಕಾರವು ಅಮೇರಿಕಾದ ಶರಣಾಗತ ಶರತ್ತುಗಳನ್ನು ಅಂಗೀಕರಿಸುವುದಾಗಿ ಜಪಾನ ವಾರ್ತಾಸಂಸ್ಥೆ ತಿಳಿಸಿದೆ.

ಚೀನೀ ಸರ್ಕಾರ ಮತ್ತು ಕಮ್ಯುನಿಸ್ಟರಲ್ಲಿ ಮತಬೇಧ ಉಂಟಾಗುತ್ತಿರುವುದು ಜಪಾನಿನ ಹಂಚಿಕೆಯ ಬಗ್ಗೆ ಎಂದು ತಿಳಿಯಬಂದಿದೆ.

ಚಿಯಾಂಗ್ ಕೈಷೇಕ್ ದೇಶದ ಪರಿಸ್ಥಿತಿಯನ್ನು ಚರ್ಚಿಸುವ ಸಲುವಾಗಿ ಚೀನೀ ಕಮ್ಯುನಿಸ್ಟ್ ನಾಯಕರುಗಳಿಗೆ ಆಹ್ವಾನವಿತ್ತಿರುವುದಾಗಿ ತಿಳಿದುಬಂದಿದೆ.

ಸಂಯುಕ್ತ ರಾಷ್ಟ್ರಗಳು ಈ ಯುದ್ಧದಲ್ಲಿ ಏನಕ್ಕೈದು ಮಿಲಿಯನ್ ಜನಗಳ ನಷ್ಟವನ್ನು ಹೊಂದಿದೆ. ಯುದ್ಧಕ್ಕಾಗಿ ಒಂದು ಟ್ರಿಲಿಯನ್ ಡಾಲರ್ ವೆಚ್ಚವಾಗಿದೆ. ಮಿತ್ರರು ೧೨ ಮಿಲಿಯನ್ ಖೈದಿಗಳನ್ನು ಸೆರೆ ಹಿಡಿದಿರುವರು.

ಲಂಡನ್ ಆ 16 — ಜಪಾನಿನ ಹೊಸ ಮಂತ್ರಿಮಂಡಲ ಸ್ಥಾಪಿಸಲು ಚಕ್ರವರ್ತಿ ಹಿರೋಹಿತೋರವರ ಪತ್ನಿಯ ಚಿಕ್ಕಪ್ಪ ನರುಹಿಕೋರನ್ನು ಚಕ್ರವರ್ತಿ ಸೇವಿಸಿರುವರು. ಇವರೇ ಮುಖ್ಯಮಂತ್ರಿಗಳಾಗಿರುವರು.

ಲಂಡನ್, ಆ 15 — ಅಣು ಬಾಂಬಿನ ಗುಟ್ಟಿನ ವಿಷಯದಲ್ಲಿ ರಷ್ಯಾಕ್ಕೆ ಭಾಗವಿಲ್ಲವೆಂದು ಬ್ರಿಟನ್ ಹೇಳಿಕೆಯಾಗಿದೆ.

ಇಟಲಿಯಲ್ಲಿ ರಾಜತ್ವಹೋಗಬೇಕು

ಪೇರಿಸ್, ಆ 12 — ನವೆಂಬರ್‌ನಲ್ಲಿ ನಡೆಯುವ ಇಟಾಲಿಯನ್ ಕಾನ್ಸ್ಟಿಟ್ಯುಯಂಟ್ ಅಸೆಂಬ್ಲಿಯ ಚುನಾವಣೆಯ ಸಂಕರ, ಇಟಲಿಯಲ್ಲಿ ರಾಜತ್ವವನ್ನು ಮೂಲೆಗೊತ್ತರಿಸಿ, ಪ್ರಜಾಪ್ರಭುತ್ವ ಸರ್ಕಾರ ಸ್ಥಾಪಿಸಲಾಗುವುದೆಂದು ಇಲ್ಲಿಗೆ ಬಂದಿದ್ದ, ಇಟಾಲಿಯನ್ ವೈಸ್ ಪ್ರಿಮಿಯರ್ ಮಿ | ಪಿಯೆಟ್ರೊ ನೆನಿಯವರು ತಿಳಿಸಿದರು.

ಪ್ಯಾರಿಸ್ ಆ 13 — ಪೀಟನ್ನಿನ ವಿಚಾರಣೆ ಮುಗಿಯಿತು. ಅತನಿಗೆ ಮರಣ ದಂಡನೆಯು ವಿಧಿಸಲ್ಪಡಬೇಕೆಂದು ಪ್ರಾಸಿಕ್ಯೂಟರು ಮನವಿಮಾಡಿದರು. ಈ ವಾರದಲ್ಲೇ ತೀರ್ಪು ಹೊರಬೀಳುವುದು.

೩ ವಾರಗಳು

ಲಂಡನ್ ಆ 15— ಪೋಸ್ಟ್‌ಡಾಂ ಕಟ್ಟಕಡೆ ಆಜ್ಞೆ ಹೊರಟು 3 ವಾರಗಳಲ್ಲಿ ಅಣು ಬಾಂಬಿನ ಹಾವಳಿ, ರಷ್ಯಾದ ಯುದ್ಧ ಘೋಷಣೆ, ಜಪಾನ್ ಶರಣಾಗತ, ಎಲ್ಲಾ ನಡೆದುಹೋಯಿತು —

ಜುಲೈ, 26 — ತ್ರಿಮೂರ್ತಿಗಳ ಪೋಸ್ಡಾಂ ಕಟ್ಟ ಕಡೆ ಆಜ್ಞೆ.

ಜುಲೈ, 27 — ಆಜ್ಞೆ ನಿರಾಕರಿಸಲಾಗುವುದೆಂದು ಜಪಾನ್ ನ್ಯೂಸ್ ಏಜನ್ಸಿ ಹೇಳಿಕೆ.

ಆ. 5 — ಪ್ರಥಮ ಅಣು ಬಾಂಬಿನ ಪ್ರಯೋಗ.

ಆ 8 — ರಷ್ಯಾ ಯುದ್ಧ ಘೋಷಿಸಿತು.

ಆ. 9 — 2 ನೇ ಅಣು ಬಾಂಬಿನ ಪ್ರಯೋಗ.

ಆ. 10 — ಜಪಾನ್ ಸರಕಾರ ಶರಣು ಹೋಗಲು ಸಿದ್ಧ. ಆದರೆ ಚಕ್ರವರ್ತಿಗಳಿಗೆ ರಾಜ್ಯಧಿಕ್ಯಚ್ಯುತಿಯಾಗಕೂಡದೆಂದು ಟೋಕಿಯೋ ರೇಡಿಯೋ ಹೇಳಿಕೆ.

ಆ. 12 — ಮಿತ್ರ ಮುಖ್ಯ ಸೇನಾನಿ ಆಜ್ಞೆಯಂತೆ ನಡೆಯಬೇಕೆಂದು ಮಿತ್ರರ ಉತ್ತರ.

ಲಂಡನ್ ಆ 14 — ಮಿತ್ರರ ಹೇಳಿಕೆಯಂತೆ ಶರಣಾಗತವಾಗಲು ಚಕ್ರವರ್ತಿಗಳು ಸಂದೇಶ ಕೊಡುವರೆಂದು ಜಪಾನ್ ವಾರ್ತಾ ಸಂಸ್ಥೆ ತಿಳಿಸುವುದು.

ಸೈದಾಪೇಟೆ — ಹಾಲಿಗೆ ನೀರು ಬೆರಸಿ ಮೋಸದನೆಂದು ಒಬ್ಬ ಹಾಲಿನವನಿಗೆ ರೂ. 50 ಜುಲ್ಮಾನೆ ವಿಧಿಸಲಾಗಿದೆ.

ಂ ಂ

ಮಹೇಂದ್ರ ಚೌದ್ರಿ ಗಲ್ಲಿಗೇರಿಸಲ್ಪಟ್ಟ ಪ್ರಕರಣದ ವಿಚಾರ್ಶೆ ಸರಿಯಾಗಿ ಆಗಬೇಕೆಂದು ಗಾಂಧೀಜಿ ಹೇಳಿದರು.

ಂ ಂ

ಎರಡು ಅಣು ಬಾಂಬಿನ ತಯಾರಿಕೆಗೆ ರೂ. ೬೦೦ ಕೋಟಿ ಖರ್ಚಂತೆ!

ಂ ಂ

ಪ್ರತಿಬಂಧಕಾಜ್ಞೆ ವಜಾನಿಮಿತ್ತ ಆಗಾ ಹೋರಿನ ೬೯ ಕಾಂಗ್ರೆಸ್ ಕಟ್ಟಾಳುಗಳು ಕಾಂಗ್ರೆಸಿಗೆ ವಹಿಸಲ್ಪಡುವುದು.

ಂ ಂ

ಲಂಡನ್—ಹೊಸ ಪಾರ್ಲಿಮೆಂಟಿನಲ್ಲಿ ಚಕ್ರವರ್ತಿಗಳು ಪ್ರಚಲಿತ ವಿಷಯಗಳನ್ನೊಳಗೊಂಡ ಭಾಷಣ ಮಾಡಿದರು.

ಜಯ ಲಭಿಸಲೆಂದು ೬ ವರ್ಷದ ಮಗುವನ್ನು ಬಲಿಯಿತ್ತರು

ಸ್ಥಳೀಕ ಮುಖಂಡನೊಬ್ಬನನ್ನು ಆರಿಜುದರ ಕ.ರಿಕು ವಾದ ವಿವಾದಗಳಿದ್ದು ಆಗಾ ಎಂಬಲ್ಲಿ ಏದು ವ್ಯುಂದಿ. ತಂತಮ್ಮ ಉಮೇದ್ವಾರರಿಗೆ ಜಯವಾಗಬೇಕೆಂದು ಅರ್ ವರ್ಷದ ಮಗುವನ್ನು ಕಡಿದು ಅದರ ಬೇರೆ ಬೇರೆ ಅಂಗಗಳನ್ನು ದೇವತೆಗೆ ಬಲಿಯಿತ್ತರು. ಈ ಅಮಾನುಷ ಕೃತ್ಯದ ಕುರಿತು ವಿಚಾರಣೆ ನಡೆದು ಐವರಿಗೂ ಮರಣದಂಡನೆಯನ್ನು ವಿಧಿಸಲಾಗಿದೆ.

——

ಶಕುಂತಲಾ ಚಿತ್ರದ ಶತಮಾನೋತ್ಸವ

ವೆಚ್ಚವೆಲ್ಲವೂ ಕಳೆದು, ಮುಂಬಯಿನ ಸ್ವಸ್ತಿಕ್ ಟಾಕೀಸಿನಲ್ಲಿ ಶತಮಾನೋತ್ಸವವನ್ನು ಮುಗಿಸಿ, ಶಕುಂತಲಾ ಚಿತ್ರವು ತನ್ನ ದಿಗ್ದರ್ಶಕ ಶಾಂತರಾಮರಿಗೆ ಮುಂಬಯಿ ಒಂದರಲ್ಲೇ ಹದಿನೇಳುವರೆ ಲಕ್ಷ ರೂ. ಗಳನ್ನು ಗಳಿಸಿಕೊಟ್ಟಿದೆ.

——

ಅಣುಬಾಂಬು ಜರ್ಮನರ ಪ್ರಯೋಗ

ವಿ॥ ಚರ್ಚಿಲ್ಲರ ವಿಜ್ಞಾನ ಸಲಹೆಗಾರ ಲಾರ್ಡ್ ಸಭೆಯಲ್ಲಿ ಕೊಟ್ಟ ಒಂದು ಹೇಳಿಕೆಯನ್ನು ಕೇಳಿದರೆ ಮೈ ಜುಮ್ಮೆನಿಸತ್ತದೆ. ಇಡೀ ಜಗತ್ತನ್ನೇ ನಾಶಪಡಿಸಬಲ್ಲ 'ಅಣುಬಾಂಬ್' ಎಂಬ ಭಯಂಕರ ಅಸ್ತ್ರೋಪಕರಣವನ್ನು ನಾಜಿಗಳು ಮುಕ್ಕಾಲು ಪಾಲು ತಯಾರಿಸಿದ್ದರೆಂದು ವರದಿಯಿತ್ತರು.

ಈ ಬಾಂಬಿನ ಪ್ರಥಮ ಪ್ರಯೋಗ ಹಿರೊಶಿಮಾ ಮೇಲೆ ನಡೆದು ಶೇಕಡ ೬೦ ರಷ್ಟು ಪಟ್ಟಣ ನಾಶವಾಯಿತು.

——

ಡಾ। ಕೊಟ್ನೀಸ್

ಶಾಂತರಾವರ ಡಾ। ಕೊಟ್ನೀಸ್ ಚಿತ್ರದ ಜಾಗತಿಕ ಹಕ್ಕಿಗಾಗಿ ೨೭ ಲಕ್ಷ ರೂ. ಗಳನ್ನು ಕೊಡುವುದಾಗಿ ವಾರ್ನರ್ ಬ್ರದರ್ಸ್ ಸಂಸ್ಥೆ ತಿಳಿಸಿರುವದಂತೆ

ಕಳೆದವಾರ

ಮಿರೇಜ್ ಆ 12 — ಜಮಖಂಡಿಯಲ್ಲಿ ಪ್ರಜೆಗಳ ಮತಾಚಾರಕ್ಕೆ ವಿರುದ್ಧವಾಗಿ ಶಾರದಾ ಆಕ್ಟನ್ನೂ, ಬಾಲ್ಯವಿವಾಹ ನಿರೋಧವನ್ನೂ ಜಾರಿಗೆ ತರುವುದಿಲ್ಲವೆಂದು ಪ್ರಕಟವಾಗಿದೆ.

ಂ ಂ ಂ ಂ

ಲಕ್ನೋ ಆ 11 — ಗೊಂಡಾದ ವರ್ತಕ ಸಂಘದ ಸೆಕ್ರೆಟರಿ ಮಿ॥ ಅಬ್ದುಲ್ ರಜಾಕ್ 4 ಆಣೆಯ ಒಂದು ಎಲೆಕ್ಟ್ರಿಕ್ ಟಾರ್ಚ್ ಬಲ್ಬನ್ನು 6 ಆಣೆಗೆ ಮಾರಿದ್ದಕ್ಕಾಗಿ ರೂ. 20000 ಜುಲ್ಮಾನೆ ಮತ್ತು 3 ತಿಂಗಳು ಕಠಿಣ ಸಜಾ ವಿಧಿಸಲಾಗಿದೆ.

ಂ ಂ ಂ ಂ

ವಿಚಾರಣೆಯಾಗುವ ಯುದ್ಧ ತಕ್ಸೀರುದಾರರ ಪಟ್ಟಿಯಲ್ಲಿ ವಾನ್ ಪಾಪೆನ್ ಮೊದಲಿಯರಾಗಿದ್ದಾರೆ.

ಂ ಂ ಂ ಂ

ವಾಷಿಂಗ್ಟನ್ ಆ 11 — ಜಪಾನ್ ಚಕ್ರವರ್ತಿ ಹಿರೋಹಿಟೋ ಒಬ್ಬ ಯುದ್ಧ ತಕ್ಸೀರುದಾರನಾಗಿ ವಿಚಾರಣೆಗೊಳಗಾಗಬಹುದೆಂದೂ, ರಾಜಕುಮಾರನು ರೀಜನ್ಸಿಯಲ್ಲಿ ರಾಜ್ಯಭಾರ ಮಾಡಬಹುದೆಂದೂ, ಹೇಳಲಾಗಿದೆ.

ಂ ಂ ಂ ಂ

ಲಂಡನ್, ಆ 13 — ಮಿತ್ರರು ಕಳುಹಿಸಿರುವ ಜಪಾನ್ ಶರಣಾಗತ ಕರಾರುಗಳಿಗೆ ಜಪಾನಿಂದ ಪ್ರತಿಕ್ಷಣದಲ್ಲೂ ಉತ್ತರ ನಿರೀಕ್ಷಿಸಲಾಗಿದೆ. ಜಪಾನ್ ಮಂತ್ರಿ ಮಂಡಲವು ತೀರಾ ಚರ್ಚೆ ನಡೆಸುತ್ತಿರುವುದೆಂದೂ ಹೇಳಲಾಗಿದೆ. ಫೆಸಿಪಿಕ್ ಯುದ್ಧವೇನೋ ಮುಂದುವರಿಯುತ್ತಲೇಯಿದೆ. ಜಪಾನ್ ಮಂತ್ರಿ ಮಂಡಲ ಈ ವಿಷಯದಲ್ಲಿ ಮಂತ್ರಾಲೋಚನೆ ನಡೆಸುತ್ತಿರುವಾಗಲೇ ಕ್ರೂಸಿಲ್ ಫ್ಲೀಂಬರ್ ಶನಿವಾರ ಸೇರಿ ಟೋಕಿಯೋ ಮೇಲೆ ೧೨೦೦ ಬಾಂಬ್‌ಗಳು ಧಾಳಿ ನಡೆಸಿದವು.

ನಮ್ಮ ಆರೋಗ್ಯ ಆನಂದದಾಯಕ ಶ ಜೀವಿತಕ್ಕೆ

ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ವುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಸಾರಿಕ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಪುಡಿ ಒಂದು ಪಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 3-8-0 ಮಾತ್ರ.

ನಮ್ಮ ಸುಘಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಪೂಜಾರ್ಹವಾದುದು.

ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ

ವಲ್ಲಭದಾಸ್ ತೇಜ್‌ಪಾಲ್,

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

೧೪. ಗೋವಿಂದಪ್ಪ ನಾಯಕ್ ರಸ್ತೆ,

ಜಿ. ಟಿ. ಮುದರಾಸು.

ಜಪಾನ್ ಚಕ್ರವರ್ತಿ ಭವಿಷ್ಯ

ಬೆಂಗಳೂರು ಆ 12 — ಜಪಾನಿನ ಚಕ್ರವರ್ತಿಯು ಪದಚ್ಯುತಿ ಮಾಡಲ್ಪಡುವುದಿಲ್ಲವೆಂದು ಬೆಂಗಳೂರು ಅಸ್ಟ್ರಲಾಜಿಕಲ್ ಮ್ಯಾಗಜಿನ್ನಿನ ಸಂಪಾದಕ ಶ್ರೀ ರಾಮಣ್ಣರ ಭವಿಷ್ಯ ವಾಣಿ. ಮಾರ್ಚಿ 1946 ರವರೆಗೆ ಜಪಾನಿ ಚಕ್ರವರ್ತಿಗೆ ಬಹಳ ಕಷ್ಟಕಾಲವೆಂದೂ ಇದರಿಂದ ಅವರ ಅಧಿಕಾರ ನಾಮಾವಶೇಷವಾಗುವುದೆಂದೂ ಅವರು ಹೇಳಿದ್ದಾರೆ. 1967 ಮತ್ತೊಂದು ಪ್ರಪಂಚಯುದ್ಧ ನಡೆಯುವ ಅವಕಾಶವಿದೆಯೆಂದಿರುವರು. ಮಾರ್ಚಿ 1946 ಕ್ಕೆ ಮುಂಚೆ ಭಾರತಕ್ಕೆ ಪ್ರಾಂತಿಕ ಸ್ವರಾಜ್ಯ ಲಭಿಸಿ, ಭಾರತಕ್ಕೆ ಅರ್ಧಂಬರ್ಧ ಸ್ವಾತಂತ್ರ್ಯ ದೊರೆಯುವುದೆಂದಿರುವರು.

ಂ ಂ

ಜಪಾನ್ ರಾಯಭಾರಿ

ಲಂಡನ್, ಆ 13 — ಐರ್ಲೆಂಡಿನಲ್ಲಿರುವ ಜಪಾನ ರಾಯಭಾರಿ ಸತ್ಸೂಯಾ ಬೆಪ್ಪು ಬೆಪ್ಪೇ ಆಗಿದ್ದಾನೆ. ಕೆಲವು ವಾರಗಳಿಂದ ಆತನಿಗೆ ಜಪಾನಿನಿಂದ ಕಾಗದಗಳಾಗಲೀ ಹಣಕಾಸಾಗಲಿ ದೊರೆತಿಲ್ಲ. ಜಪಾನು ಸೋತರೆ ಐರ್ಲೆಂಡಿನಲ್ಲಿ ನುಂದೆ ವಾಸಮಾಡಿಕೊಂಡಿರಲು ಒಂದು ಸೇರಿರುವನಂತೆ.

ಂ ಂ

ವೃತ್ತಾಂತ ಸಂಗ್ರಹ

ಸರಕಾರವು ಹೆಚ್ಚು ಕಾಗದ ಪಡೆಯು ಪಾಲಿಸಲಿಲ್ಲವಾಗಿ ಫ್ರಾನ್ಸಿನ ಪತ್ರಿಕೆಗಳು ಬಂದಾಗಿವೆ.

ಂ ಂ

ಅಮೇರಿಕಾಕ್ಕೆ ಜಿ। ಡಿಗಾಲ್ ಇದೇ 22 ರಲ್ಲಿ ಭೇಟಿ ಕೊಡುವರು.

ಂ ಂ

ಭಾರತ ಫಿಲಂಗಳ ಮೇಲೆ ಹತೋಟಿ ಶೀಘ್ರದಲ್ಲೇ ವಜಾವಾಗುವದಾಗಿ ತಿಳಿದು ಬಂದಿದೆ.

ಂ ಂ

ಪೋಪ್ನಾಂ ಪ್ರಕಟಣೆಯಂತೆ ಜಪಾನಿನ ಶರಣಾಗತವನ್ನು ಒಪ್ಪಿದ ಬಗ್ಗೆ ಚಕ್ರವರ್ತಿಗಳಿಂದ ಕೂಡಲೇ ಸಂದೇಶವು ಹೊರಡುವುದೆಂದು ಜಪಾನೆ ವಾರ್ತಾ ಸಂಸ್ಥೆ ತಿಳಿಸಿದೆ.

ಈ ವಾರ ಭವಿಷ್ಯ

(ಓಂ ಜೋತಿಷ್ಕರಾಂಡ)

ಮೇಷ — ಆರೋಗ್ಯದಿಂದ ಕೂಡಿರುತ್ತೀರಿ. ಧನಾಭಾವವಿರುವುದಿಲ್ಲ. ಮಾನಸಿಕ ಸ್ಥಿತಿಯು ಯೋಗ್ಯವಾಗಿರುತ್ತದೆ. ವ್ಯವಹಾರದಲ್ಲಿಯೂ ಅನುಕೂಲವುಂಟು.

ಂ ಂ

ವೃಷಭ — ಮನಸ್ಸು ಶಾಂತಿ ಸಮಾಧಾನಗಳಿಂದ ಕೂಡಿರುವುದಿಲ್ಲ. ಆರೋಗ್ಯವು ಉತ್ತಮವಾಗಿದ್ದು. ವ್ಯವಹಾರದಲ್ಲಿ ಜವಾಬ್ದಾರಿ ಹೆಚ್ಚುವುದು.

ಂ ಂ

ಮಿಥುನ — ದೇಹಿಕ, ಆರ್ಥಿಕ ಸ್ಥಿತಿಗಳು ಚಿಂತಾಜನಕವಾಗಿರುತ್ತವೆ. ಮನೋಸ್ಥಿತಿಯು ಕೆಟ್ಟಿರುತ್ತದೆ. ಹೆದರಬೇಡಿ. ಮುಂಜಿ ನಿಮ್ಮ ಸ್ಥಿತಿಯು ಉತ್ತಮಗೊಳ್ಳುತ್ತದೆ.

17—8—45 ರಿಂದ

At Ranjit

DUKH-SUKH

ರಣಜಿತ್ ಟಾಕೀಸಿನಲ್ಲಿ

ಸಿತಾರ — ರಾಮಶರ್ಮ — ವಾಸಂತಿ

ಪಾತ್ರವಹಿಸಿರುವ

ದುಖ್-ಸುಖ್

(ಹಿಂದಿ)

ಪ್ರತಿ ದಿನ 3 ಆಟಗಳು

ಕರ್ಕಾಟಕ — ನಿಮ್ಮಿಗಿದು ಶುಭ ಫಲಗಳಿಂದ ಕೂಡಿದ ವಾರ. ಆರ್ಥಿಕ ಸ್ಥಿತಿಗಳು ಉತ್ತಮವಿರುವುದು.

ಸಿಂಹ — ಮನಸ್ಸು ಆಹ್ಲಾದಕರವಾಗಿರುತ್ತದೆ. ಕಾರಣ, ಧನಾಭಾವವಿರುವುದಿಲ್ಲ. ಆರೋಗ್ಯವು ಉತ್ತಮವಾಗಿರುವುದು.

ಂ ಂ

ಕನ್ಯಾ — ಸಾಧು ಸಮಾಗಮವಿರುವುದು. ಕನ್ಫ್ಯೂಲಕ ಮಾನಸ್ಥಿತಿಯನ್ನು ಪರಿಹರ್ವಿಸಿಯನ್ನು ಹೊಂದಲು ಅವಕಾಶ ದೊರೆತರಕಾಯಿರಿ. ಲಾಭ, ಸುಖ, ಶಾಂತಿಗಳು ಹೆಚ್ಚುತ್ತವೆ.

ಂ ಂ

ತುಲಾ — ಆರೋಗ್ಯ ವಿಷಯದಲ್ಲಿ ಹೆಚ್ಚು ಗಮನವನ್ನಿಡಿರಿ. ಆಹಾರವಿಯಮವನ್ನು ಪಾಲಿಸಿರಿ. ದೇಹಿಕ, ಆರ್ಥಿಕ, ವ್ಯವಹಾರಿಕ ಸ್ಥಿತಿಗಳು ಚನ್ನಾಗಿರುತ್ತವೆ.

ಂ ಂ

ವೃಶ್ಚಿಕ — ದುಷ್ಟರನ್ನು ದೂರವಿರಿಸಿ ಕ್ಷೇಮದಲ್ಲಿ ನಿಮಿಷ ಈ ವಾರ ಸುಖದಾಯಕವಾಗಿರುತ್ತದೆ. ಇದನ್ನು ನೆನೆಪಿನಲ್ಲಿಡಿರಿ. ನಿಮ್ಮ ಆರೋಗ್ಯವು ಚನ್ನಾಗಿರುತ್ತದೆ.

ಂ ಂ

ಧನಸ್ಸು — ಯಶೋಭಿವೃದ್ಧಿಯಕವೂ, ಜಯಕಾರಿಯೂ ಆದ ವಾರವಿದು. ಸಂತೋಷವು ಹೆಚ್ಚುತ್ತದೆ.

ಂ ಂ

ಮಕರ — ಲಾಭ, ಸನ್ಮಾನಗಳ ಯೋಗವಿದೆ. ಆರೋಗ್ಯ ಭಾಗ್ಯವನ್ನು ಸ್ವಸ್ಥವಾಗಿರುತ್ತೀರಿ.

ಕುಂಭ — ಆರೋಗ್ಯದ ಕಡೆ ಹೆಚ್ಚು ಗಮನ ಕೊಡಿರಿ. ಮಾನಸಿಕ ಆರ್ಥಿಕ ಸ್ಥಿತಿಗಳು ಉತ್ತಮವಾಗಿರುವುದು. ಕಾರ್ಯಗಳೆಲ್ಲಾ ವಿಘ್ನಗಳು ಪ್ರಾಪ್ತವಾ ಬಹಳ ಚನ್ನಾಗಿ ಸಂಭವಿಸುವುದು.

ಮೀನ — ದೇವರನ್ನು ನಂಬಿ ನಿಮ್ಮ ಕರ್ತವ್ಯವನ್ನು ಸಿದ್ಧ. ಕ್ಷೇತ್ರಗಳಲ್ಲಿ ಜಯಪತ್ರವನ್ನು ಪಡೆಯುವಿರಿ. ಸೇನೆಗೆ ಈ ವಾರ ಬಹಳ ಅನುಕೂಲವಿರುವುದು.

ಲೆ | ಜ | ಸಂ ಎಂ. ಜಿ. ಎಕ್. ಸ್ಪೆಷಲ್

AT Opera 2nd Week

ONE I LOVED

ಅಪೇರಾ ಟಾಕೀಸ್‌ನಲ್ಲಿ .... 2 ನೇ ವಾರ

ಮುಜರಿಂ (ಹಿಂದಿ)

ಮೋತೀಲಾಲ್, ಅಟಲಾದೇಸಾಯ್, ಯಾಕೂಬ್, ಜಗದೀಶ್

ಪಾತ್ರವಹಿಸಿರುವರು

ಹಿಂದಿನ ಬದಲಾವಣೆ— ಭಾಯ್‌ಚಾರ

Next Change at OPERA—

" BROTHERHOOD "

— An Amar Release

ರಕ್ತವೃದ್ಧಿಗೆ — ಧಾತುಪುಷ್ಟಿಗೆ

ಶಕ್ತಿಸುಧಾ

Edited, Printed and published by M. S. Krishna Rao, at the Satvavadi Press, Chamaraja Agrahar, Mysore.

For Good Printing—
L. N. Press
Srirampet MYSORE